**ಕರ್ನಾಟಕ ಸರ್ಕಾರದ ನಡವಳಿ**

ವಿಷಯ: 2015-16ನೇ ಸಾಲಿನ ಶಾಸನಬದ್ಧ ಅನುದಾನದ ದ್ವಿತೀಯ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 129 ಗ್ರಾಪಂಕಾ 2002 (3) ದಿನಾಂಕ: 02-12-2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007 ದಿನಾಂಕ:27-03-2008.
3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 253 ಎಫ್‌ಎನ್ 2015 ದಿನಾಂಕ: 01-04-2015.
4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಗ್ರಾಪಸ 2015 ದಿನಾಂಕ: 16-03-2015.
5) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 21 ಗ್ರಾಪಂಅ 2015 ದಿನಾಂಕ:24-06-2015
6) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 759 ಗ್ರಾಪಂಅ 2014 ಬೆಂಗಳೂರು, ದಿನಾಂಕ:09-01-2015, 13-02-2015, 30-04-2015 ಮತ್ತು 10-08-2015
7) ಸರ್ಕಾರದ ಆದೇಶ ಸಂಖ್ಯೆ:ನಆಇ 66, 35, ಮತ್ತು 57 ಎಂ ಎಲ್ ಆರ್ 2015, ದಿನಾಂಕ:05-10-2015, 03-10-2015, 08-10-2015
8) ಆರ್ಥಿಕ ಇಲಾಖೆ(ವೆಚ್ಚ-6) ಅ.ಟಿ.ಸಂಖ್ಯೆ:ಅಇ 267 ವೆಚ್ಚ-6/2015, ದಿನಾಂಕ:09-10-2015

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಸರ್ಕಾರವು ಅಧಿಕರಿಸಿದೆ.

2015-16ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿ ಒಟ್ಟಾರೆ ರೂ. 616.62 ಕೋಟಿ (ಆರು ನೂರ ಹದಿನಾರು ಕೋಟಿ ಅರವತ್ತ ಎರಡು ಲಕ್ಷ ರೂಪಾಯಿಗಳು) ಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ 2011ನೇ ವರ್ಷದ ಜನಗಣತಿ ಆಧಾರದ ಮೇಲೆ ಎಂಟು ಸಾವಿರಕ್ಕಿಂತ (8000 ಕ್ಕಿಂತ) ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 10.00 ಲಕ್ಷಗಳು ಹಾಗೂ ಎಂಟು ಸಾವಿರಕ್ಕಿಂತ ಹೆಚ್ಚಿಗೆ ಅಂದರೆ ಪ್ರತಿ 1000 ಜನ ಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1.00 ಲಕ್ಷ ಅನುದಾನವನ್ನು ಹೆಚ್ಚಿಸಲಾಗಿದೆ.

ಸರ್ಕಾರದ ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಆದೇಶದಲ್ಲಿ, 5629 ಗ್ರಾಮ ಪಂಚಾಯತಿಗಳಿಗೆ 1ನೇ ಕಂತಿನ ಶಾಸನಬದ್ಧ ಅನುದಾನವಾಗಿ ರೂ.154.00 ಕೋಟಿಗಳನ್ನ ಬಿಡುಗಡೆಗೊಳಿಸಲಾಗಿದೆ. ಮೇಲೆ ಓದಲಾದ (6)ರ ಸರ್ಕಾರದ ಆದೇಶಗಳಲ್ಲಿ, ರಾಜ್ಯದಲ್ಲಿ 458 ಗ್ರಾಮ ಪಂಚಾಯತಿಗಳನ್ನು ನೂತನವಾಗಿ ಸೃಜಿಸಲಾಗಿದೆ. ನಗರಾಭಿವೃದ್ಧಿ ಇಲಾಖೆಯು ಹೊಸದಾಗಿ ಸೃಜಿಸಿದ 03 ಗ್ರಾಮ ಪಂಚಾಯತಿಗಳನ್ನೊಳಗೊಂಡಂತೆ, ಒಟ್ಟು 72 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿ/ಪುರಸಭೆ/ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ಸರ್ಕಾರದ ಆದೇಶಗಳಲ್ಲಿ ಬೆಳಗಾವಿ ಜಿಲ್ಲೆಯ ಬೋರಗಾಂವ, ಅರಭಾಂವಿ ಮತ್ತು ಕೊಪ್ಪಳ ಜಿಲ್ಲೆಯ ಭಾಗ್ಯನಗರ ಗ್ರಾಮ ಪಂಚಾಯತಿಗಳನ್ನು ಮೇಲ್ದರ್ಜೆಗೇರಿಸುವ ಅಂತಿಮ ಆದೇಶವನ್ನು ಹೊರಡಿಸಿದೆ. ಆರ್ಥಿಕ ಇಲಾಖೆಯ ಮೇಲೆ ಓದಲಾದ ಕ್ರಮ ಸಂಖ್ಯೆ(8) ರಲ್ಲಿ 2015-16ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಒದಗಿಸಿರುವ ರೂ.616.62 ಕೋಟಿಗಳನ್ನು

ಪೂರ್ಣವಾಗಿ ಉಪಯೋಗಿಸಿಕೊಂಡು, ನಂತರ ಹೊಸದಾಗಿ ಪ್ರಾರಂಭಗೊಂಡಿರುವ ಗ್ರಾಮ ಪಂಚಾಯತಿಗಳು ಸೇರಿದಂತೆ ಹೆಚ್ಚುವರಿಯಾಗಿ ಬೇಕಾಗಿರುವ ಅನುದಾನಕ್ಕಾಗಿ ಪ್ರಸ್ತಾವನೆ ಕಳುಹಿಸುವಂತೆ ತಿಳಿಸಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಪ್ರಸ್ತುತ 6017+3 ಗ್ರಾಮ ಪಂಚಾಯತಿಗಳಿದ್ದು, ಇವುಗಳಿಗೆ **ದ್ವಿತೀಯ** ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನ ರೂ.159.805 ಕೋಟಿ (ಒಂದು ನೂರ ಐವತ್ತೊಂಬತ್ತು ಕೋಟಿ ಎಂಬತ್ತು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ.

ಪ್ರಸ್ತುತ ನೂತನವಾಗಿ ಸೃಜಿಸಲಾಗಿರುವ ಪಂಚಾಯತಿಗಳು ಹಾಗೂ ಮೇಲ್ದರ್ಜೆಗೇರಿಸಿದ 03 ಪಂಚಾಯತಿಗಳು ಸೇರಿದಂತೆ ರಾಜ್ಯದಲ್ಲಿ 6017+3 ಗ್ರಾಮ ಪಂಚಾಯತಿಗಳಿಗೆ, ದ್ವಿತೀಯ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನ ರೂ.159.805 ಕೋಟಿ (ಒಂದು ನೂರ ಐವತ್ತೊಂಬತ್ತು ಕೋಟಿ ಎಂಬತ್ತು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗಿದ್ದು, ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯತಿಗಳ ಬಾಕಿಯಿರುವ ಜುಲೈ 2015 ರಿಂದ ಸೆಪ್ಟೆಂಬರ್ 2015ರ ಅವಧಿಯ ವಿದ್ಯುತ್ ವೆಚ್ಚ ಪಾವತಿಸಲು ತಿಳಿಸಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ(4)ರಲ್ಲಿ ಗ್ರಾಮ ಪಂಚಾಯತಿಗಳ ESCROW ಖಾತೆಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಲಕ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಗ್ರಾಪಂಅ 2015,**
**ಬೆಂಗಳೂರು, ದಿನಾಂಕ: 24-11-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನ ಶಾಸನಬದ್ಧ ಅನುದಾನದ ದ್ವಿತೀಯ ತ್ರೈಮಾಸಿಕ ಕಂತಿನ ರೂ.159.805 ಕೋಟಿಗಳನ್ನು (ಒಂದು ನೂರ ಐವತ್ತೊಂಬತ್ತು ಕೋಟಿ ಎಂಬತ್ತು ಲಕ್ಷದ ಐವತ್ತು ಸಾವಿರ ರೂಪಾಯಿಗಳು ರೂಪಾಯಿ ಮಾತ್ರ) ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿಯಲ್ಲಿ 6017+3 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಸಂಖ್ಯೆ 04462010088409 ಮುಖಾಂತರ ರಾಜ್ಯದಲ್ಲಿನ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 2,50,000/- (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಒಂದು ಸಾವಿರ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1,00,000/-(ಒಂದು ಲಕ್ಷ ರೂಪಾಯಿಗಳು ಮಾತ್ರ)ಅನುದಾನವನ್ನು ಹೆಚ್ಚಿಸಲಾಗಿದೆ. ಈ ಕೆಳಕಂಡ ಮಾದರಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅನುಬಂಧ(1) ರಲ್ಲಿರುವಂತೆ ದ್ವಿತೀಯ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

1. ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ ಅನುದಾನದ ಪೈಕಿ ಶೇಕಡಾ 60 ರಷ್ಟುನ್ನು ಜುಲೈ 2015 ರಿಂದ ಸೆಪ್ಟೆಂಬರ್ 2015ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಲಕ ಗ್ರಾಮ ಪಂಚಾಯತಿಗಳ ESCROW ಖಾತೆಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.
2. ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ ಶೇಕಡಾ 40 ರಷ್ಟು ಅನುದಾನವನ್ನು ಮಾತ್ರ ಸಿಬ್ಬಂದಿ ವೇತನಕ್ಕಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ದಿನಾಂಕ: **31-12-2015** ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3-4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಹಾಗೂ ಕೆಲವು ಜಿಲ್ಲೆಗಳಲ್ಲಿ ಈ ಅನುದಾನದ ಚೆಕ್/ಡಿ.ಡಿ.ಗಳನ್ನು ತಾಲ್ಲೂಕು ಪಂಚಾಯಿತಿ ವಶಕ್ಕೆ ನೀಡಿ ನಂತರ ತಾಲ್ಲೂಕು ಪಂಚಾಯಿತಿಗಳಿಂದ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಈ ಅನುದಾನದ ಮೊತ್ತವು ಸಿಂಡಿಕೇಟ್ ಬ್ಯಾಂಕ್ ಮುಖಾಂತರ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಆನ್-ಲೈನ್ ಮುಖಾಂತರ ಜಮೆಯಾದ ದಿನಾಂಕದಿಂದ 5 (ಐದು) ದಿನಗಳೊಳಗೆ ಸಂಬಂಧಪಟ್ಟ**

ಎಲ್ಲಾ ಗ್ರಾಮ ಪಂಚಾಯಿತಿಯ ಖಾತೆಗೆ ಆನ್-ಲೈನ್ ಮುಖಾಂತರ ಜಮಾ ಆಗಿರತಕ್ಕದ್ದು. ಯಾವುದೇ ಕಾರಣಕ್ಕೂ ಚೆಕ್ ಅಥವಾ ಡಿ.ಡಿ. ನೀಡತಕ್ಕದ್ದಲ್ಲ. ಅನುದಾನ ಬಿಡುಗಡೆ ಆದೇಶ ಮತ್ತು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಆನ್-ಲೈನ್ ಮುಖಾಂತರ ವರ್ಗಾಯಿಸಿರುವ ದಿನಾಂಕದ ಮಾಹಿತಿಯನ್ನು ಮತ್ತು ಸದರಿ ಗ್ರಾಮ ಪಂಚಾಯಿತಿ ಖಾತೆಗಳಲ್ಲಿ ಜಮಾ ಆಗಿರುವ ದಿನಾಂಕವನ್ನು ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡತಕ್ಕದ್ದು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ಪಾವತಿಸಲು ಕ್ರಮ ವಹಿಸಿ, ವೇತನ ಪಾವತಿಸಿದ ವಿವರಗಳ ಮಾಹಿತಿಯನ್ನು ಪ್ರತಿ ತಿಂಗಳ 6ನೇ ದಿನಾಂಕದಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೆ ಅಪ್ ಲೋಡ್ ಮಾಡತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ಆರ್ಥಿಕ ಗ್ರಾಅಪ:685:ಪಿಬಿಎಸ್:2015 ದಿನಾಂಕ: 18-11-2015ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/11

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3) ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ 30 ಜಿಲ್ಲಾ ಪಂಚಾಯಿತಿಗಳು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುಚ್ಛಕ್ತಿ ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-01.
8) ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುಚ್ಛಕ್ತಿ ಕಂಪನಿ, ಪಿ.ಬಿ.ರಸ್ತೆ, ನವನಗರ, ಹುಬ್ಬಳ್ಳಿ-580029.
9) ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗ ವಿದ್ಯುಚ್ಛಕ್ತಿ ಕಂಪನಿ, ಸ್ಟೇಷನ್ ರಸ್ತೆ, ಗುಲ್ಬರ್ಗ-585101.
10) ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುಚ್ಛಕ್ತಿ ಕಂಪನಿ, ಎ.ಬಿ.ಶೆಟ್ಟಿ ವೃತ್ತ, ಮಂಗಳೂರು-575001.
11) ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಕಂಪನಿ, ನಂ.927, ಎಲ್‌ಜೆ ಅವೆನ್ಯೂ, ನ್ಯು ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570009.
12) ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿಗಳು(ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ಕೋರಿದೆ).
13) ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು (ದೂರವಾಣಿ ಸಂಖ್ಯೆ: 080-22216450, 22215584)
14) ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
15) ಮಾಹಿತಿ ಕೇಂದ್ರ/ವೆಬ್ ಸೈಟ್, ಗ್ರಾ.ಅ.ಪ ಇಲಾಖೆ.

ಪ್ರತಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
4) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ.
5) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇಲಾಖೆ.

* ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಗ್ರಾಪಂಅ 2015, ದಿನಾಂಕ:24-11-2015 ರ ಅನುಬಂಧ(1)

### 2015-16ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಎರಡನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡುತ್ತಿರುವ ಶಾಸನಬದ್ಧ ಅನುದಾನದ ವಿವರ

ರೂ. ಕೋಟಿಗಳಲ್ಲಿ

| ಕ್ರಸಂ | ಉಪ ಲೆಕ್ಕ ಶೀರ್ಷಿಕೆ | ಜಿಲ್ಲೆಯ ಹೆಸರು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | 2015-16ನೇ ಸಾಲಿಗೆ ಬಿಡುಗಡೆ ಮಾಡಬೇಕಾದ ಶಾಸನಬದ್ಧ ಅನುದಾನ | 2015-16 ನೇ ಸಾಲಿನಲ್ಲಿ 1ನೇ ಕಂತಿನಲ್ಲಿ ಈಗಾಗಲೇ ಬಿಡುಗಡೆ ಮಾಡಿದ ಶಾಸನ ಬದ್ದ ಅನುದಾನ | 2015-16 ನೇ ಸಾಲಿನಲ್ಲಿ ಬಿಡುಗಡೆಮಾಡುತ್ತಿರುವ ಎರಡನೇ ತ್ರೈಮಾಸಿಕ ಕಂತಿನ ಅನುದಾನ | ವಿದ್ಯುತ್ ಬಿಲ್ ಪಾವತಿಸಲು ಶೇಕಡ 60ರ ಅನುದಾನ | ಸಿಬ್ಬಂದಿ ವೆಚ್ಚ ಪಾವತಿಸಲು ಶೇಕಡ 40ರ ಅನುದಾನ |
|---|---|---|---|---|---|---|---|---|
| 1 | 461 | ಬಾಗಲಕೋಟೆ | 198 | 20.43 | 4.720 | 5.235 | 3.141 | 2.094 |
| 2 | 401 | ಬೆಂಗಳೂರು ನಗರ | 96 | 12.97 | 3.180 | 3.263 | 1.958 | 1.305 |
| 3 | 402 | ಬೆಂಗಳೂರು ಗ್ರಾಮಾಂತರ | 105 | 11.27 | 2.70 | 2.858 | 1.715 | 1.143 |
| 4 | 413 | ಬೆಳಗಾವಿ | 501+2 | 56.03 | 14.30 | 13.938 | 8.363 | 5.575 |
| 5 | 418 | ಬಳ್ಳಾರಿ | 198 | 21.91 | 5.54 | 5.455 | 3.273 | 2.182 |
| 6 | 419 | ಬೀದರ್ | 186 | 19.82 | 4.79 | 5.010 | 3.006 | 2.004 |
| 7 | 456 | ಚಾಮರಾಜನಗರ | 130 | 13.42 | 3.20 | 3.408 | 2.045 | 1.363 |
| 8 | 453 | ಚಿಕ್ಕಬಳ್ಳಾಪುರ | 157 | 15.91 | 3.89 | 4.008 | 2.405 | 1.603 |
| 9 | 408 | ಚಿಕ್ಕಮಗಳೂರು | 227 | 22.90 | 5.7 | 5.733 | 3.440 | 2.293 |
| 10 | 403 | ಚಿತ್ರದುರ್ಗ | 189 | 20.13 | 4.99 | 5.045 | 3.027 | 2.018 |
| 11 | 409 | ದಕ್ಷಿಣ ಕನ್ನಡ | 230 | 23.88 | 5.5 | 6.128 | 3.677 | 2.451 |
| 12 | 451 | ದಾವಣಗೆರೆ | 233 | 23.96 | 5.98 | 5.993 | 3.596 | 2.397 |
| 13 | 415 | ಧಾರವಾಡ | 144 | 14.64 | 3.37 | 3.755 | 2.253 | 1.502 |
| 14 | 462 | ಗದಗ | 122 | 12.31 | 2.81 | 3.168 | 1.901 | 1.267 |
| 15 | 410 | ಹಾಸನ | 267 | 27.03 | 6.57 | 6.820 | 4.092 | 2.728 |
| 16 | 463 | ಹಾವೇರಿ | 223 | 22.63 | 5.4 | 5.743 | 3.446 | 2.297 |
| 17 | 417 | ಕಲಬುರಗಿ | 264 | 27.15 | 6.19 | 6.988 | 4.193 | 2.795 |
| 18 | 411 | ಕೊಡಗು | 104 | 10.41 | 2.5 | 2.638 | 1.583 | 1.055 |
| 19 | 404 | ಕೋಲಾರ | 156 | 16.16 | 4.04 | 4.040 | 2.424 | 1.616 |
| 20 | 466 | ಕೊಪ್ಪಳ | 153+1 | 16.56 | 4.04 | 4.193 | 2.516 | 1.677 |
| 21 | 412 | ಮಂಡ್ಯ | 234 | 24.25 | 6.05 | 6.068 | 3.641 | 2.427 |
| 22 | 407 | ಮೈಸೂರು | 266 | 28.28 | 6.6 | 7.228 | 4.337 | 2.891 |
| 23 | 420 | ರಾಯಚೂರು | 181 | 20.30 | 5.04 | 5.088 | 3.053 | 2.035 |
| 24 | 452 | ರಾಮನಗರ | 127 | 13.22 | 3.37 | 3.283 | 1.970 | 1.313 |
| 25 | 405 | ಶಿವಮೊಗ್ಗ | 271 | 26.97 | 6.54 | 6.810 | 4.086 | 2.724 |
| 26 | 406 | ತುಮಕೂರು | 331 | 33.81 | 8.3 | 8.503 | 5.102 | 3.401 |
| 27 | 457 | ಉಡುಪಿ | 158 | 16.65 | 3.98 | 4.223 | 2.534 | 1.689 |
| 28 | 416 | ಉತ್ತರ ಕನ್ನಡ | 231 | 23.22 | 5.43 | 5.930 | 3.558 | 2.372 |
| 29 | 414 | ವಿಜಯಪುರ | 213 | 23.55 | 5.9 | 5.883 | 3.530 | 2.353 |
| 30 | 421 | ಯಾದಗಿರಿ | 122 | 13.52 | 3.38 | 3.380 | 2.028 | 1.352 |
| | | **ಒಟ್ಟು** | **6017+3** | **633.3** | **154.00** | **159.805** | **95.883** | **63.922** |

(ಎಂ.ಬಿ.ಥೋರ್ರೆ) 25/11

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.